ಶ್ರೀ ಎಂ.ಎಸ್. ಆತ್ಮಾನಂದ : ಮಾನ್ಯ ಅಧ್ಯಕ್ಷರೇ, ಸಾಕಷ್ಟು ವಿವರಗಳನ್ನು ಒದಗಿಸಿದ್ದಾರೆ. ಈ ವಿದ್ಯುತ್ ಸಂಪರ್ಕ ಪಡೆಯುವ ಕ್ರಮವನ್ನು ಮತ್ತಷ್ಟು ಏನಾದರೂ ಸರಳೀಕರಣಗೊಳಿಸಬೇಕೆಂದು ಹೇಳಿ ಸರ್ಕಾರಕ್ಕೆ ಮನವಿಗಳೇನಾದರೂ ಬಂದಿದೆಯೇ?

ಶ್ರೀ ಎ. ವೀರಕುಮಾರ್ ಪಾಟೀಲ್ : ಮಾನ್ಯ ಅಧ್ಯಕ್ಷರೇ, ಕೆಎಸ್ಎ ಅವರ ಹತ್ತಿರ ಪ್ರೊಸೀಜರನ್ನು ಸಿಂಪ್ಲಿಫೈ ಮಾಡುವ ಸಲುವಾಗಿ ಒಂದು ಪ್ರಸ್ತಾವನೆ ಇದೆ. ಆ ಆರ್ಡರ್ ಬಂದಕೂಡಲೇ ನಾವು ಈ ಪ್ರೊಸೀಜರನ್ನು ಸಿಂಪ್ಲಿಫೈ ಮಾಡುತ್ತೇವೆ.

ಆರಾಧನ ಯೋಜನೆ ಬಗ್ಗೆ

523 - ಶ್ರೀ ಕೆ.ಬಿ. ಮಲ್ಲಿಕಾರ್ಜುನ (ಬೀರೂರು) : ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1999-2000 ಮತ್ತು 2000-2001ನೇ ಸಾಲಿನಲ್ಲಿ ಚಿಕ್ಕಮಗಳೂರು ಜಿಲ್ಲೆಯ ದೇವಾಲಯಗಳ ಅಭಿವೃದ್ಧಿಗೆ ಆರಾಧನಾ ಯೋಜನೆಯಡಿಯಲ್ಲಿ ಎಷ್ಟು ಹಣ ನೀಡಲಾಗಿದೆ? (ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು)*

ಆ) *ಹಣ ಬಿಡುಗಡೆ ಮಾಡುವಾಗ ಕೆಲವು ವಿಧಾನ ಸಭಾ ಕ್ಷೇತ್ರಗಳಿಗೆ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಹಾಗಿದ್ದಲ್ಲಿ, ಇದನ್ನು ಸರಿಪಡಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ?*

ಶ್ರೀ ಬಾಬುರಾವ್ ಚಿಂಚನಸೂರ್ (ಮುಜರಾಯಿ ರಾಜ್ಯ ಸಚಿವರು) :

ಅ) ಆರಾಧನಾ ಯೋಜನೆಯಡಿ ಅನುದಾನವನ್ನು ಚಿಕ್ಕಮಗಳೂರು ಜಿಲ್ಲೆಯಲ್ಲಿ ತಾಲ್ಲೂಕುವಾರು, ಉಳಿದ ಎಲ್ಲಾ ಜಿಲ್ಲೆಗಳಿಗೆ ವಿಧಾನಸಭಾ ಕ್ಷೇತ್ರವಾರು ಸಮಾನವಾಗಿ ಹಣವನ್ನು ಹಂಚಿಕೆ ಮಾಡಲಾಗುವುದು. 1999-2000ನೇ ಸಾಲಿನಲ್ಲಿ (ಸರ್ಕಾರದ ಆದೇಶ ಸಂ: ಕಂಇ 77 ಮುಆಬಿ 99, ದಿ. 31.3.2000ದಲ್ಲಿ) ಪ್ರತಿ ತಾಲ್ಲೂಕಿಗೆ ತಲಾ ರೂ. 1,73,912-00ರಂತೆ ಜಿಲ್ಲೆಗೆ ರೂ. 12,17,384-00 ಬಿಡುಗಡೆ ಮಾಡಲಾಗಿದೆ.

2000-01ನೇ ಸಾಲಿನಲ್ಲಿ ಆರಾಧನಾ ಯೋಜನೆಯಡಿ ಹಣ ಬಿಡುಗಡೆಯು ಪರಿಶೀಲನೆಯಲ್ಲಿದೆ.

ಆ) ಆರಾದನಾ ಯೋಜನೆಯಡಿ ಚಿಕ್ಕಮಗಳೂರ ಜಿಲ್ಲೆಯ 7 ತಾಲ್ಲೂಕಿಗೂ ಸಮಾನವಾಗಿ ಹಣ ಬಿಡುಗಡೆ ಮಾಡಿರುವುದರಿಂದ ಯಾವುದೇ ತಾಲ್ಲೂಕಿಗೆ ಅನ್ಯಾಯವಾಗಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ನನ್ನ ಮೊದಲನೇ ಪ್ರಶ್ನೆಗೆ ತಾಲ್ಲೂಕುವಾರು ವಿವರವನ್ನು ಕೊಟ್ಟಿದ್ದಾರೆ. ಅದೇ ರೀತಿ ನನ್ನ ಎರಡನೇ ಪ್ರಶ್ನೆಗೆ ತಾಲ್ಲೂಕುವಾರು

ಹಣ ಬಿಡುಗಡೆ ಮಾಡಿದ್ದೇವೆ. ಅನ್ಯಾಯ ಆಗಿಲ್ಲ ಎಂದು ಹೇಳುತ್ತಾರೆ. ಈಗ ನನ್ನ ಪ್ರಶ್ನೆ ಏನು ಅಂದರೆ ಬೀರೂರು ಕ್ಷೇತ್ರಕ್ಕೆ ಯಾವುದೇ ರೀತಿಯ ತಾಲ್ಲೂಕು ಕೇಂದ್ರ ಇಲ್ಲ. ಹಾಗಾಗಿ ತಾಲ್ಲೂಕು ಕೇಂದ್ರಗಳಿಗೆ ಬಿಡುಗಡೆ ಮಾಡಿದರೆ ಬೀರೂರು ಕ್ಷೇತ್ರಕ್ಕೆ ಹಣ ಬರುತ್ತಿಲ್ಲ. ಈಗ ಆರಾಧನಾ ಸಮಿತಿಯನ್ನು ಕ್ಷೇತ್ರವಾರು ಮಾಡಿರುವ ದೃಷ್ಟಿಯಿಂದ ಕಳೆದ ವರ್ಷ ಅನ್ಯಾಯ ಆಗಿದೆ, ಈ ಸಾರಿ ಅನ್ಯಾಯ ಆಗಬಾರದು ಎಂಬ ದೃಷ್ಟಿಯಿಂದ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಕ್ಷೇತ್ರವಾರು ಹಣವನ್ನು ಬಿಡುಗಡೆ ಮಾಡಬೇಕೆಂದು ನನ್ನ ಒತ್ತಾಯ ಇದೆ. ಅದಕ್ಕೆ ದಯಮಾಡಿ ಮಾನ್ಯ ಸಚಿವರು ಉತ್ತರ ಕೊಡಬೇಕು.

ಶ್ರೀ ಬಾಬುರಾವ್ ಚಿಂಚನಸೂರ್ : ಮಾನ್ಯ ಅಧ್ಯಕ್ಷರೆ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಜಾಸ್ತಿ ತಾಲ್ಲೂಕು ಇದ್ದು ವಿಧಾನಸಭಾ ಕ್ಷೇತ್ರಗಳು ಕಡಿಮೆ ಇದ್ದ ಕಾರಣ ನಾವು ಹೆಚ್ಚಿಗೆ ಹಣವನ್ನು ಬಿಡುಗಡೆ ಮಾಡುವ ಸಲುವಾಗಿ ನಾವು ಕ್ಷೇತ್ರವಾರು ಹಣವನ್ನು ಹಂಚಿಕೆ ಮಾಡಿದ್ದೇವೆ. ಉಳಿದ ಜಿಲ್ಲೆಗಳಿಗೆ ವಿಧಾನಸಭಾ ಕ್ಷೇತ್ರಗಳಿಗೆ ಹಣ ಹಂಚಿಕೆ ಆಗಿದೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ : ಈಗ ಏನಾಗಿದೆ ಎಂದರೆ ಬೇರೆಲ್ಲಾ ಕಡೆ ಕ್ಷೇತ್ರವಾರು ಹಣ ಹಂಚಿಕೆ ಆಗಿದೆ. ಚಿಕ್ಕಮಗಳೂರು ಜಿಲ್ಲೆಗೆ ಏಕೆ ತಾಲ್ಲೂಕುವಾರು ಹಂಚುತ್ತಿದ್ದಾರೆ. ಆಶ್ರಯ ಸಮಿತಿಯಲ್ಲೂ ಇದೇ ಅನ್ಯಾಯ ಆರಾಧನಾ ಸಮಿತಿಯಲ್ಲೂ ಅನ್ಯಾಯ ಆಗುತ್ತಿದೆ. ದಯಮಾಡಿ ತಾವು ನನ್ನ ರಕ್ಷಣೆಗೆ ಬರಬೇಕು. ಮಾನ್ಯ ಮುಖ್ಯಮಂತ್ರಿಗಳೂ ಇಲ್ಲಿದ್ದಾರೆ. ನನ್ನ ಕಷ್ಟವನ್ನು ಅವರಲ್ಲಿ ಕೇಳಿಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು : ಎಲ್ಲಾ ಜಿಲ್ಲೆಗಳಲ್ಲಿ ಕಾನ್‌ಸ್ಟಿಟ್ಯುಯೆನ್ಸಿ ವೈಜ್ ಡಿಸ್ಟ್ರಿಬ್ಯೂಟ್ ಮಾಡುತ್ತೀರಿ, ಆದರೆ ಇಲ್ಲಿ ಏಕೆ ತಾಲ್ಲೂಕುವಾರು ಹಂಚಿಕೆ ಮಾಡುತ್ತಿದ್ದೀರಿ ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ.

ಶ್ರೀ ಬಾಬುರಾವ್ ಚಿಂಚನಸೂರ್ : ಮಾನ್ಯ ಅಧ್ಯಕ್ಷರೆ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಏಳು ತಾಲ್ಲೂಕು ಇದ್ದು ವಿಧಾನಸಭಾ ಕ್ಷೇತ್ರಗಳು ಆರು ಇವೆ. ಅದಕ್ಕೆ ಜಿಲ್ಲೆಗೆ ಹೆಚ್ಚಿಗೆ ಹಣವನ್ನು ಬಿಡುಗಡೆ ಮಾಡುವ ಸಲುವಾಗಿ ಕ್ಷೇತ್ರವಾರು ಹಣ ಹಂಚಿಕೆ ಮಾಡಲಾಗಿದೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ : ಮಾನ್ಯ ಅಧ್ಯಕ್ಷರೆ, ನಿಜ. ಅವರು ಏಳು ತಾಲ್ಲೂಕಿಗೆ ಹಣ ಕೊಡುತ್ತಾರೆ. ಶೃಂಗೇರಿ ತಾಲ್ಲೂಕಿಗೆ ಮೂರು ಕ್ಷೇತ್ರದ ದುಡ್ಡು ಹೋಗುತ್ತದೆ. ಬೀರೂರು ವಿಧಾನಸಭಾ ಕ್ಷೇತ್ರಕ್ಕೆ ದುಡ್ಡೇ ಬರುವುದಿಲ್ಲ. ಇದಕ್ಕೆ ಸಂಬಂಧಪಟ್ಟಂತೆ ಒಂದು ಉದಾಹರಣೆ ಹೇಳುತ್ತೇನೆ. ಆಶ್ರಯ ಸಮಿತಿಯಲ್ಲಿ ಶೃಂಗೇರಿ ಕ್ಷೇತ್ರಕ್ಕೆ 1515 ಮನೆ ಹೋಗಿದೆ. ಇನ್ನು ಐದು ವಿಧಾನಸಭಾ ಕ್ಷೇತ್ರಕ್ಕೆ 2000 ಮನೆ ಬಂದಿದೆ. ನಾವು ಅಷ್ಟರಮಟ್ಟಿಗೆ ಇವತ್ತು ತುಳಿತಕ್ಕೆ ಒಳಗಾಗಿದ್ದೇವೆ. ಹಾಗಾಗಿ ಬೀರೂರು ವಿಧಾನಸಭಾ ಕ್ಷೇತ್ರದ ರಕ್ಷಣೆಗೆ ತಾವು ಹಾಗೂ ಮಾನ್ಯ ಮುಖ್ಯಮಂತ್ರಿಗಳು ಬರಬೇಕು ಎಂದು ಕೇಳುತ್ತೇನೆ.

ಅಧ್ಯಕ್ಷರು : ಅದನ್ನು ಸರಿಪಡಿಸಿ.

ಶ್ರೀ ಬಾಬುರಾವ್ ಚಿಂಚನಸೂರ್ : ಡೆಪ್ಯುಟಿ ಕಮೀಷನರ್ ಅವರಿಂದ ರಿಪೋರ್ಟ್ ತರಿಸಿ ನಾನು ಸರಿ ಮಾಡುತ್ತೇನೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ : ನಮಗೆ ವಿಧಾನಸಭಾ ಕ್ಷೇತ್ರವಾರು ಹಂಚುತ್ತೇವೆಂದು ಹೇಳಿದರೆ ಮತ್ತೇನೂ ಅಭ್ಯಂತರವಿಲ್ಲ. ನಾನು ನಿನ್ನೆ ಸಹ ಮಾನ್ಯ ಮುಜರಾಯಿ ಮಂತ್ರಿಗಳಿಗೆ ಕೇಳಿದೆ.

ಅಧ್ಯಕ್ಷರು : ವಿಧಾನಸಭಾ ಕ್ಷೇತ್ರವಾರು ಹಂಚಿಕೆ ಮಾಡಿ. ಅದನ್ನು ಸರಿಪಡಿಸುತ್ತಾರೆ. ಅದು ಆಗಲಿಲ್ಲ. ಮುಜರಾಯಿ ಇಲಾಖೆ ಹಣ ಬಿಡುಗಡೆ ಮಾಡಬೇಕಾದರೂ ಇದೇ ಪರಿಸ್ಥಿತಿ ಆಗಿದೆ. ಬೀರೂರು ಕ್ಷೇತ್ರಕ್ಕೆ ಒಂದು ರೂಪಾಯಿಯನ್ನೂ ಕೊಟ್ಟಿಲ್ಲ. ಈ ಆರಾಧನಾ ಸ್ಕೀಮಿನಲ್ಲೂ ಹೀಗೆಯೇ ಆದರೆ ಹೇಗೆ?

ಅಧ್ಯಕ್ಷರು : ಈ ಬಾರಿ ಅದು ಮುಂದೆ ಹೋಗುವುದಿಲ್ಲ. ನಾನು ಹೇಳುತ್ತೇನೆ. ಸರಿಪಡಿಸುತ್ತಾರೆ. ಅದು ಸರಿ ಹೋಗುವ ಹಾಗೆ ನಾನು ನೋಡಿಕೊಳ್ಳುತ್ತೇನೆ.

ಶ್ರೀ ಬಿ.ಆರ್. ನೀಲಕಂಠಪ್ಪ : ಮಾನ್ಯ ಅಧ್ಯಕ್ಷರೆ, ಇದು ಬೀರೂರು ಕ್ಷೇತ್ರಕ್ಕೆ ಒಂದೇ ಅಲ್ಲ. ತರೀಕೆರೆ, ಬೀರೂರು, ಕಡೂರು, ಚಿಕ್ಕಮಗಳೂರಿನ ಮೂಡಗೆರೆ ನಾಲ್ಕು ತಾಲ್ಲೂಕುಗಳಿಗೆ ಅನ್ವಯ ಆಗುತ್ತದೆ. ಕ್ಷೇತ್ರವಾರು ಆಗುವುದರಿಂದ ಒಂದು ಕಡೆ ಮೂರು ತಾಲ್ಲೂಕು ಹೋಗುತ್ತದೆ, ಇನ್ನು ಉಳಿದ ಐದು ಜನ ಎಂಎಲ್‌ಎಗಳು ಸಿಂಹಪಾಲು ಆಗಿ, ಐದು ಜನರ ಸಿಂಹಪಾಲು ಒಂದೇ ಕಡೆ ಆಗುತ್ತದೆ. ಆಶ್ರಯ ಮತ್ತು ಅಂಬೇಡ್ಕರ್ ಮನೆಗಳು ಮತ್ತು ಮುಜರಾಯಿ ಇಲಾಖೆ, ಈ ಎರಡೂ ಇಲಾಖೆಯಿಂದ ಆಗುತ್ತದೆ. ಆದ್ದರಿಂದ ಮಾನ್ಯ ಸದಸ್ಯರು ಹೇಳಿರತಕ್ಕದ್ದು ಸರಿಯಾಗಿದೆ.

ಅಧ್ಯಕ್ಷರು : ನಿಮ್ಮ ಜಿಲ್ಲೆಯ ಉಸ್ತುವಾರಿ ಮಂತ್ರಿಗಳಾದ ಮಾನ್ಯ ಚಂದ್ರೇಗೌಡರು ಇದ್ದಾರೆ. ಅವರ ಹತ್ತಿರ ಮಾತನಾಡಿ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ : ಒಂದು ಆಶ್ಚರ್ಯ ಆಗುತ್ತಿದೆ. ಅವರ ವಿಧಾನಸಭಾ ಕ್ಷೇತ್ರಕ್ಕೆ ಸಿಂಹಪಾಲು ಹೋಗುತ್ತದೆ. ಇನ್ನುಳಿದ ನಾಲ್ಕು ಪಾಲನ್ನು ನಮ್ಮ ಐದು ಜನರಿಗೆ ಹಂಚುತ್ತಾರೆ. ನಾವು ಎಲ್ಲಿ ತುಳಿತಕ್ಕೆ ಒಳಗಾಗಿರುವುದು ಅಂದರೆ ಅವರಿಂದಲೇ. ನಾವೇನಾದರೂ ಕೆಡಿಬಿ ಮೀಟಿಂಗ್ ಅಥವಾ ಬೇರೆ ಕಡೆ ಈ ವಿಷಯವನ್ನು ಪ್ರಸ್ತಾಪ ಮಾಡಿದರೆ ಇದನ್ನು ಇಲ್ಲಿ ಪ್ರಸ್ತಾಪ ಮಾಡುವುದಲ್ಲ. ದಯಮಾಡಿ ವಿಧಾನ ಸಭೆಯಲ್ಲಿ ಪ್ರಸ್ತಾಪ ಮಾಡಿ ಎಂದು ಹೇಳಿದ್ದಾರೆ. ದೈವವಶಾತ್ ಅವರು ಇಲ್ಲೇ ಇದ್ದಾರೆ. ದಯಮಾಡಿ ನಮಗೆ ಆಗಿರತಕ್ಕಂತಹ ಅನ್ಯಾಯವನ್ನು ಸರಿಪಡಿಸಲು ನಾವೆಲ್ಲರೂ ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು : ತಮ್ಮ ಛೇಂಬರಿಗೆ ಮಾನ್ಯ ಚಂದ್ರೇಗೌಡರನ್ನು ಹಾಗೂ ಮಾನ್ಯ ಸದಸ್ಯರನ್ನು ಕರೆಸಿ ಸ್ವಲ್ಪ ಸರಿ ಮಾಡಿ.

ಶ್ರೀ ಡಿ.ಬಿ. ಚಂದ್ರೇಗೌಡ : ಇದು ಇವತ್ತು ನಿನ್ನೆಯ ಪ್ರಶ್ನೆಯಲ್ಲ.

ಅಧ್ಯಕ್ಷರು : ನಾರ್ತ್ ಕೆನರಾದಲ್ಲೂ ಹಾಗೆಯೇ ಆಗಿದೆ, ಆರು ವಿಧಾನಸಭಾ ಕ್ಷೇತ್ರ 9 ತಾಲ್ಲೂಕುಗಳು ಇದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಸರ್ಕಾರ ಯಾವ ಕಾಲದಿಂದ ಅಸ್ತಿತ್ವದಲ್ಲಿ ಇದೆಯೋ ಆ ಎಲ್ಲಾ ಕಾಲದಲ್ಲೂ ನಡೆದುಕೊಂಡು ಬಂದಿದೆ. ಅಲೋಕೇಶನ್ಸನ್ನು ತಾಲ್ಲೂಕ್‌ವೈಸ್ ಮಾಡುತ್ತಾರೆ. ಎರಡು ತಾಲ್ಲೂಕು ಸೇರಿ ಒಂದು ಕ್ಷೇತ್ರ ಇದೆ. ಮೂರು ತಾಲ್ಲೂಕು ಸೇರಿಯೂ ಒಂದು ಕ್ಷೇತ್ರ ಇದೆ. ಒಂದು ತಾಲ್ಲೂಕಿಗೆ ಎರಡು ಕ್ಷೇತ್ರ. ಆದ್ದರಿಂದ ತಾಲ್ಲೂಕುವಾರು ಅಲೊಕೇಶನ್ಸ್ ಮಾಡುತ್ತಾರೆ. ಅಲೊಕೇಶನ್ಸ್‌ನಲ್ಲಿ ಸರಿಪಡಿಸಬೇಕು. ಚಂದ್ರೇಗೌಡರಿಂದಲೇ ಅನ್ಯಾಯ ಆಗಿದೆ ಎಂದು ಹೇಳಿದರೆ ಹೇಗೆ? ಮೂರು ತಾಲ್ಲೂಕು ನಾನು ಮಾಡಿದ್ದು ಅಲ್ಲ. ಬಹಳ ಶತಶತಮಾನಗಳಿಂದ ಈ ರೀತಿ ಅಲೊಕೇಶನ್ಸ್ ಮಾಡಿದ್ದಾರೆ.

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಬೇರೆ ಜಿಲ್ಲೆಯಲ್ಲೆಲ್ಲಾ ಕ್ಷೇತ್ರವಾರು ಕೊಡುತ್ತಿದ್ದಾರೆ. ಚಿಕ್ಕಮಗಳೂರು ಬಿಟ್ಟು ಬೇರೆ ಕಡೆಯೆಲ್ಲಾ ಕ್ಷೇತ್ರವಾರು ಕೊಡುತ್ತಿದ್ದಾರೆ.

ಅಧ್ಯಕ್ಷರು : ಉತ್ತರ ಕನ್ನಡ ಜಿಲ್ಲೆಯಲ್ಲಿ ಆರು ವಿಧಾನಸಭಾ ಕ್ಷೇತ್ರಗಳು ಇವೆ. 11 ರೆವಿನ್ಯೂ ತಾಲ್ಲೂಕುಗಳು ಇವೆ. ಸರ್ಕಾರ ಕುಳಿತುಕೊಂಡು ಯಾವುದಾದರೂ ಒಂದು ಕ್ರಮವನ್ನು ಅನುಸರಿಸಬೇಕು.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ : ಇದರ ಬಗ್ಗೆ ಒಂದು ಆಶ್ವಾಸನೆ ಸಿಗಬೇಕು. ಇಲ್ಲದಿದ್ದರೆ ಕಷ್ಟ ಆಗುತ್ತದೆ. ನಾವು ಪ್ರತಿ ಸಾರಿ ಸಹ ಎಲ್ಲಿ ಪ್ರಸ್ತಾಪ ಮಾಡಿದರೂ ನಮಗೆ ಇದೇ ಸಿಗತಕ್ಕ ಉತ್ತರ. ನಮಗೆ ಹತ್ತು ವರ್ಷಗಳಿಂದ ಈ ಗಲಾಟೆ ಇದೆ.

ಶ್ರೀ ಬಾಬುರಾವ್ ಚಿಂಚನಸೂರ್ : ಇದು ಬಹಳ ವರ್ಷಗಳಿಂದ ನಡೆದುಕೊಂಡು ಬಂದಿದೆ. ನಾನು ಮಾನ್ಯ ಚಂದ್ರೇಗೌಡರ ಹತ್ತಿರ ಚರ್ಚೆ ಮಾಡಿ ಮತ್ತೆ ಮುಜರಾಯಿ ಇಲಾಖೆಯ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಇದನ್ನು ಸರಿಮಾಡುತ್ತೇನೆ.

ಅಧ್ಯಕ್ಷರು : ಸರಿ ಮಾಡುತ್ತಾರೆ ಬಿಡಿ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ : ವಿಧಾನಸಭಾ ಕ್ಷೇತ್ರವಾರು ಆಶ್ರಯ ಸಮಿತಿ ರಚನೆ ಆಗಿದ್ದು ಆರಾಧನಾ ಸಮಿತಿ ವಿಧಾನಸಭಾ ಕ್ಷೇತ್ರವಾರು ರಚನೆ ಆಗಿದೆ. ದಯಮಾಡಿ ಆ ಉದ್ದೇಶಕ್ಕೆ ಅನುಗುಣವಾಗಿ ನಮಗೆ ಹಣವನ್ನು ವಿಧಾನಸಭಾ ಕ್ಷೇತ್ರವಾರು ಬಿಡುಗಡೆ ಮಾಡಲಿ.

ಅಧ್ಯಕ್ಷರು : ಇದು ಒಂದು ಜಿಲ್ಲೆಯ ಪ್ರಶ್ನೆ ಅಲ್ಲ. ನಾಲ್ಕೈದು ಜಿಲ್ಲೆಗಳಲ್ಲಿ ಇದೇ ರೀತಿ ಆಗಿದೆ. ಅದಕ್ಕೆ ಸರ್ಕಾರದವರು ಬೇರೆ ಕಾರ್ಯಕ್ರಮಗಳನ್ನು ಅಳವಡಿಸಿಕೊಳ್ಳಬೇಕು. ಕ್ಷೇತ್ರವಾರೋ ಅಥವಾ ರೆವಿನ್ಯೂ ತಾಲ್ಲೂಕ್‌ವೈಸೋ ಎಂದು ಕಾರ್ಯಕ್ರಮ ಅಳವಡಿಸಿಕೊಳ್ಳಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಸದಸ್ಯರು ಕೇಳುತ್ತಿರುವುದು ಚಿಕ್ಕಮಗಳೂರು ಜಿಲ್ಲೆಯ ಬೀರೂರು ಕ್ಷೇತ್ರಕ್ಕೆ ಸಂಬಂಧಪಟ್ಟಂತೆ. ಆದರೆ ರಾಜ್ಯದಲ್ಲಿ ಸರ್ಕಾರ ಒಂದು ನಿಯಮವನ್ನು ಪಾಲನೆ ಮಾಡಿಕೊಂಡು ಬಂದಿದೆ. ಈ ಆಶ್ರಯ ಮತ್ತು ಆರಾಧನಾ ಕಾರ್ಯಕ್ರಮಗಳಲ್ಲಿ ಎಲ್ಲ ಕಡೆ ಕ್ಷೇತ್ರವಾರು ಅಳವಡಿಸಿಕೊಂಡಿದ್ದಾರೆ. ಎರಡು ಮೂರು ಜಿಲ್ಲೆಗಳಲ್ಲಿ ಆಗಿರತಕ್ಕದ್ದನ್ನು ಸರಿಪಡಿಸಬೇಕು ಎಂದು

ಹೇಳುತ್ತಿದ್ದಾರೆ. ಸರಿಪಡಿಸುವುದಕ್ಕೆ ಸಾಧ್ಯವಿಲ್ಲವೇನು? ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾವು ವಿನಂತಿ ಮಾಡಿಕೊಳ್ಳತಕ್ಕದ್ದು. ದಯಮಾಡಿ ಈ ಆರಾಧನಾದಲ್ಲಿ ಕೊಡತಕ್ಕಂಥ ದುಡ್ಡನ್ನು ಕ್ಷೇತ್ರವಾರು ಸಮಿತಿಗಳನ್ನು ಮಾಡಿ, ಕ್ಷೇತ್ರವಾರು ಹಣವನ್ನು ಹಂಚುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು.ಇದು ಸಾಧ್ಯವಿಲ್ಲವೇನು ಎಂದು ನಾವು ಕೇಳುತ್ತಿದ್ದೇವೆ. ಕ್ಷೇತ್ರವಾರು ಇಲ್ಲ. ಎರಡು ಮೂರು ಜಿಲ್ಲೆಗಳಲ್ಲಿ ಮಾತ್ರ ಇದೆ. ಅದಕ್ಕೋಸ್ಕರವಾಗಿ ನಾವು ಕೇಳಿಕೊಳ್ಳುತ್ತಿರುವುದು.

ಶ್ರೀ ಬಿ.ಆರ್. ನೀಲಕಂಠಪ್ಪ : ಆಶ್ರಯ ಮತ್ತು ಅಂಬೇಡ್ಕರ್ ಯೋಜನೆಗಳಲ್ಲಿ ಕ್ಷೇತ್ರವಾರು ಇರಬೇಕು. ಮಾನ್ಯ ಮುಖ್ಯಮಂತ್ರಿಗಳು ಇದನ್ನು ಸರಿಪಡಿಸಬೇಕು ಎಂದು ಹೇಳುತ್ತಿರುವುದು.

ಶ್ರೀ ಆರ್.ವಿ. ದೇಶಪಾಂಡೆ : ಉತ್ತರ ಕನ್ನಡ ಜಿಲ್ಲೆಯಲ್ಲಿ ತಾವು ಹೇಳಿದ ಹಾಗೆ 6 ವಿಧಾನಸಭಾ ಕ್ಷೇತ್ರಗಳಿವೆ, ಆದರೆ 11 ತಾಲ್ಲೂಕು ಇದೆ. ನಾವೀಗ ಸರ್ಕಾರದಿಂದ ಭಾಗ್ಯಜ್ಯೋತಿ ಅಲಾಟ್‌ಮೆಂಟ್ ಇರಬಹುದು, ಆಶ್ರಯ ಮನೆ ಅಲಾಟ್‌ಮೆಂಟ್ ಇರಬಹುದು, ಅದನ್ನು ತಾಲ್ಲೂಕು ವೈಸ್ ಮಾಡುತ್ತಿದ್ದೇವೆ. ಬೆಳಗಾಂ ಜಿಲ್ಲೆಯಲ್ಲಿ 10 ತಾಲ್ಲೂಕು ಇದೆ, 18 ವಿಧಾನಸಭಾ ಕ್ಷೇತ್ರಗಳು ಇವೆ. ಅವರಿಗೆ ವಿಧಾನಸಭಾ ಕ್ಷೇತ್ರವಾರು ಅನುಕೂಲ ಆಗುತ್ತದೆ. ಆದರೆ ನಾರ್ತ್ ಕೆನರಾ ಮತ್ತು ಚಿಕ್ಕಮಗಳೂರು ತಾಲ್ಲೂಕಿಗೆ ಅಲಾಟ್‌ಮೆಂಟ್ ತಾಲ್ಲೂಕುವೈಸ್ ಆಗಬೇಕಾಗುತ್ತದೆ. ಏಕೆಂದರೆ ನಮ್ಮ ಕಡೆ 6 ವಿಧಾನ ಸಭಾ ಕ್ಷೇತ್ರ, 11 ತಾಲ್ಲೂಕು ಇದೆ. ಒಂದು ಕ್ಷೇತ್ರಕ್ಕೆ ಕೊಟ್ಟರೆ ನಾವು ಮೂರು ತಾಲ್ಲೂಕಿಗೆ ಹಂಚಬೇಕು. ಹಾಗಾಗಿ ಈ ರೀತಿ ಮಾಡಲಾಗುತ್ತಿದೆ.

ಶ್ರೀ ಸಿ. ಬೈರೇಗೌಡ : ಜನಸಂಖ್ಯೆ ಆಧಾರದ ಮೇಲೆ ಕ್ಷೇತ್ರ ವಿಂಗಡಣೆ ಆಗುತ್ತದೆ. ಅಲ್ಲಿ ಕಡಿಮೆ ಜನಸಂಖ್ಯೆ ಇರತಕ್ಕದ್ದು ಇದ್ದು ಹೆಚ್ಚು ತಾಲ್ಲೂಕು ಇರಬಹುದು. ಆದ್ದರಿಂದ, ಕ್ಷೇತ್ರವಾರು ವಿಂಗಡಣೆ ಆಗುತ್ತದೆಯೇ ವಿನಹ ತಾಲ್ಲೂಕುವಾರು ಮಾಡತಕ್ಕದ್ದು ಸರಿ ಇಲ್ಲ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ : ಸಾರ್, ನನ್ನ ಪ್ರಶ್ನೆಗೆ ಉತ್ತರ ಬರಲಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಇಲ್ಲಿ ಒಂದೇ ಸಮಸ್ಯೆ ಆಗುತ್ತಿರುವುದು.

ಅಧ್ಯಕ್ಷರು : ಇಲ್ಲಿ ಡಿಸ್ಕಷನ್ ದಯವಿಟ್ಟು ಬೇಡಿ. ನೀವು ಕೇಳಿದರೆ ಬೇರೆಯವರೂ ಕೇಳುತ್ತಾರೆ. ಇದು ಪ್ರಶ್ನೋತ್ತರ ಸಮಯ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಡಿಸ್ಕಷನ್ ಅಲ್ಲ. ನಮ್ಮ ಜಿಲ್ಲೆಯಲ್ಲೂ ಇದೇ ರೀತಿ ಇರುವುದರಿಂದ ಅನುಕೂಲ ಆಗುತ್ತದೆ. ತಾಲ್ಲೂಕುವೈಸ್ ಮಾಡಿರುವುದರಿಂದ ಜಿಲ್ಲೆಯ ಅಭಿವೃದ್ಧಿ ದೃಷ್ಟಿಯಿಂದ ಕ್ಷೇತ್ರದ ಅಭಿವೃದ್ಧಿ ದೃಷ್ಟಿಯಿಂದ ಅನುಕೂಲ ಆಗಿದೆ. ಆದರೆ ಒಂದೇ ಒಂದು ಕೆಲಸ ಏನಾಗಬೇಕು ಎಂದರೆ ಆಯಾಯ ಕ್ಷೇತ್ರಗಳಲ್ಲಿ ಕೆಲಸವನ್ನು ಮಂಜೂರು ಮಾಡುವಾಗ ಆಯಾಯ ತಾಲ್ಲೂಕುಗಳಲ್ಲಿ ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಇಲ್ಲ ಎಂದರೆ ಏನಾಗುತ್ತದೆ ಎಂದರೆ ಆಯಾಯ ತಾಲ್ಲೂಕಿನಲ್ಲಿ ಶಾಸಕರನ್ನು ಬಿಟ್ಟರೆ, ನಮ್ಮ ಕ್ಷೇತ್ರವನ್ನು ಪ್ರತಿನಿಧಿಸುವುದಕ್ಕೆ ನಮಗೆ ಸಾಧ್ಯವಾಗುವುದಿಲ್ಲ. ಹಾಗಾಗಿ ಆಯಾಯ ತಾಲ್ಲೂಕಿನಲ್ಲಿ ಆಯಾಯ ಕ್ಷೇತ್ರದ ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಕೆಲಸ ಆಗಬೇಕು.

ಅಧ್ಯಕ್ಷರು : ಈ ಅನಾಮಲೀಸ್ ಏನು ಇದೆ, ಅದನ್ನು ಸರ್ಕಾರದವರು ಸರಿಪಡಿಸುತ್ತಾರೆ.

ಕಬಿನಿ ಏತ ನೀರಾವರಿ ಯೋಜನೆ ಕುರಿತು

524 -ಶ್ರೀ ಕೃಷ್ಣಮೂರ್ತಿ ಎ.ಆರ್. (ಸಂತೇಮಾರಹಳ್ಳಿ) : ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಬಿನಿ ಏತ ನೀರಾವರಿ ಯೋಜನೆಯ ಬಿದರಹಳ್ಳಿ ಏತ ನೀರಾವರಿ ಕಾಲುವೆಯ 20 ಕಿ.ಮೀ. ಉದ್ದದ ಮುಖ್ಯ ನಾಲೆಯ ಸರ್ವೆ ಕಾರ್ಯವನ್ನು ಪೂರ್ಣಗೊಳಿಸಲಾಗಿದೆಯೇ? ಈ ಸರ್ವೆ ಕಾರ್ಯಕ್ಕಾಗಿ 2ನೇ ಕಂತಿನಲ್ಲಿ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ? ಕಬಿನಿ ಏತ ನೀರಾವರಿ ಯೋಜನೆ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಆ) ಸಂತೇಮರಹಳ್ಳಿ ಕ್ಷೇತ್ರದ ಹೊಂಗನೂರು ಹೀರೇಕೆರೆ ಏತ ನೀರಾವರಿ ಯೋಜನೆಗೆ 2000-01ನೇ ಸಾಲಿನಲ್ಲಿ ಎಷ್ಟು ಹಣವನ್ನು ಆಯವ್ಯಯದಲ್ಲಿ ಮಂಜೂರು ಮಾಡಲಾಗಿದೆ? ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು, ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಹೆಚ್.ಕೆ. ಪಾಟೀಲ್ (ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು) :

ಅ) ಪೂರ್ಣಗೊಳಿಸಲಾಗಿದೆ, ಈ ಸರ್ವೆ ಕಾರ್ಯಕ್ಕಾಗಿ ಪ್ರಸಕ್ತ ಸಾಲಿನಲ್ಲಿ ರೂ.15 ಲಕ್ಷಗಳ ಅನುದಾನ ಹಂಚಿಕೆ ಮಾಡಲಾಗಿದೆ. ಕಬಿನಿ ಏತ ನೀರಾವರಿ ಯೋಜನೆ ಕಾಮಗಾರಿಯನ್ನು ಪ್ರಸಕ್ತ ಸಾಲಿನಲ್ಲಿ ಪ್ರಾರಂಭಿಸಲು ಯೋಜಿಸಲಾಗಿದೆ.

ಆ) ರೂ. 10 ಲಕ್ಷಗಳ ಅನುದಾನ ಒದಗಿಸಲಾಗಿದೆ. ಈ ಕಾಮಗಾರಿಯ ಪೂರ್ವಭಾವಿ ಅರ್ಹತೆ ಟೆಂಡರ್ ಕರೆಯಲಾಗಿದ್ದು, ಕೆಲಸವನ್ನು ಶೀಘ್ರದಲ್ಲೆ ಪ್ರಾರಂಭಿಸಲಾಗುವುದು. ಈ ಕಾಮಗಾರಿಯನ್ನು 2 ವರ್ಷಗಳಲ್ಲಿ ಪೂರ್ಣಗೊಳಿಸಲು ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ.

ಶ್ರೀ ಎ.ಆರ್. ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೆ, ನಮ್ಮ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳು ಒಳಗೊಂಡಂತಹ ಕಬಿನಿ ಏತ ನೀರಾವರಿ ಯೋಜನೆಯ ವಿಚಾರದಲ್ಲಿ ಮಾನ್ಯ ಸಚಿವರಲ್ಲಿ ಪ್ರಶ್ನೆಯನ್ನು ಕೇಳಿದ್ದೇನೆ. ಈ ವಿಚಾರದಲ್ಲಿ ಕಬಿನಿ ಏತ ನೀರಾವರಿ ಯೋಜನೆಯ ಮುಖ್ಯ ಕಾಲುವೆಯ ಸರ್ವೆ ಕಾರ್ಯವನ್ನು ಪೂರ್ಣಗೊಳಿಸಲಾಗಿದೆಯೇ ಎಂಬ ಅಂಶವನ್ನು ನಾನು ಕೇಳಿದ್ದೇನೆ. ಅದಕ್ಕೆ ಮಾನ್ಯ ಮಂತ್ರಿಗಳು ಪೂರ್ಣ ಆಗಿದೆ. ಯೋಜನೆಯನ್ನು ಪ್ರಾರಂಭ ಮಾಡುತ್ತೇವೆ ಎನ್ನುವಂತಹ ಉತ್ತರವನ್ನು ಕೊಟ್ಟಿದ್ದಾರೆ. ನಾನಾದರೂ ಕೂಡ ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ. ಈ ಯೋಜನೆಗೆ ಮೂರನೇ ಬಾರಿ ಸರ್ವೆ ಕಾರ್ಯ ಆಗುತ್ತಿರುವುದು. ಹಿಂದೆ 1986-87ರಲ್ಲಿ ಸುಮಾರು 390 ಕೋಟಿ ರೂಪಾಯಿಗೆ ಆಡಳಿತ ಮತ್ತು ತಾಂತ್ರಿಕ ಮಂಜೂರಾತಿ ದೊರೆತು ಹಣ ನಿಗದಿಗೊಳಿಸಲಾಗಿತ್ತು. ಮತ್ತೆ 1996-97ರಲ್ಲಿ ಕೂಡ ಇದು ರೀಸರ್ವೆ ಆಗಿ ಮಾನ್ಯ ಹೆಚ್.ಕೆ. ಪಾಟೀಲ್ ಅವರು 28.3.2000 ದಿನಾಂಕದಂದು 804ನೇ ಪ್ರಶ್ನೆಯನ್ನು ಕೇಳಿದಾಗಲೂ ಕೂಡ ಈ ಒಂದು ಯೋಜನೆಗೆ 622.50